ಅದನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಪರಿಶಿಷ್ಟ ಜಾತಿ, ವರ್ಗಗಳ ಜಮೀನುದಾರರಿಗೆ ಕೊಳವೆ ಬಾವಿ ಕೊರೆಯುವುದು

117 (1368) ಶ್ರೀ ಕುಮಾರಸ್ವಾಮಿ ಹೆಚ್. ಕೆ (ಸಕಲೇಶಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009–10ರ ವರೆಗೆ ಎಷ್ಟು ಜನ ಪರಿಶಿಷ್ಟ ಜಾತಿ/ವರ್ಗಗಳ ಫಲಾನುಭವಿಗಳ ಜಮೀನುಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಪೂರ್ಣ ಮಾಹಿತಿ ನೀಡುವುದು;

ಆ) ಎಷ್ಟು ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ದೊರಕಿಸಿ ಕೊಡಲಾಗಿದೆ;

ಇ) ಇದರಿಂದ ಎಷ್ಟು ಎಕರೆ ಈವರೆಗೆ ಎಷ್ಟು ಬಾವಿಗಳನ್ನು ಕೊರೆಯಾಗಿದೆ?

ಈ) 2009–10ನೇ ಸಾಲಿನಲ್ಲಿ ಈವರೆಗೆ ಎಷ್ಟು ಬಾವಿಗಳನ್ನು ಕೊರೆಯಲಾಗಿದೆ?

ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಗೆ ಒಟ್ಟು 56846 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಪರಿಶಿಷ್ಟ ವರ್ಗಕ್ಕೆ ಒಟ್ಟು 20444 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಆ) ಒಟ್ಟು 57180 ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ದೊರಕಿಸಿ ಕೊಡಲಾಗಿದೆ.

ಇ) ಒಟ್ಟು 228118.10 ಎಕರೆ ಜಮೀನಿಗೆ ಪ್ರಯೋಜನವಾಗಿದೆ.

ಈ) ಒಟ್ಟು 8904 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂ: 117 (1368)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರ ಉತ್ತರದ ಪ್ರಕಾರ ನಮ್ಮ ರಾಜ್ಯದ ಪರಿಶಿಷ್ಟ ಜಾತಿ:ವರ್ಗಗಳ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 77,290 ಕೊಳವೆ ಬಾವಿಗಳನ್ನು ಕೊರೆದಿದ್ದಾರೆ, ಅವುಗಳಲ್ಲಿ 57,180 ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ, ಇನ್ನು 20,110 ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಬಾಕಿ ಉಳಿದಿದೆ, ಇರತಕ್ಕಂಥ ಬಾವಿಗಳಿಗೆ ಶೇಕಡ 50 ರಷ್ಟು ನೀರಿಲ್ಲದ ವಾಟರ್ ಟೇಬಲ್ ಕೆಳಗಡೆ ಹೋಗಿ ಅವು ಕೂಡ ನಿರುಪಯುಕ್ತವಾಗಿದ್ದಾವೆ ಈ ಪರಿಸ್ಥಿತಿಯಲ್ಲಿ ನೀವು ಏನು ಹೇಳಿದಿರೆಂದರೆ, 2,21,000 ಚಿಲ್ಲರೆ ಎಕರೆಯಷ್ಟು ಈ ವರ್ಗದ ಫಲಾನುಭವಿಗಳ ಜಮೀನಿಗೆ ಪ್ರಯೋಜನವಾಗಿದೆ ಎಂದು ತಾವು ಹೇಳುತ್ತಿದ್ದೀರಿ. ಈ ಪರಿಸ್ಥಿತಿಯಲ್ಲಿ ಹೇಗೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮ ಗೊಳ್ಳುವುದಕ್ಕೆ ಸಾಧ್ಯ? ಜೊತೆಗೆ, ತಾವು ಕೊರೆಯುವುದಕ್ಕೆ ಏನು ಹೇಳಿದ್ದೀರೆಂದರೆ, 2009–10ನೇ ಸಾಲಿನಲ್ಲಿ ಈವರೆಗೆ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂಬುದಕ್ಕೆ ಒಟ್ಟು 8904 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಉತ್ತರ ಕೊಡಲಾಗಿದೆ. ಇದು ಸರ್ಕಾರ ಕೊಟ್ಟಿರತಕ್ಕ ಶುದ್ಧ ಸುಳ್ಳು ಉತ್ತರವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಈ ವರ್ಷ ನಿಮಗಿದ್ದದ್ದು ಗುರಿ 8232, ಒಂದೇ ಒಂದು ಕೊರೆದಿಲ್ಲ, 2008–09ನೇ ಸಾಲಿನಲ್ಲಿ ಕೊರೆದು ಈ ವರ್ಷಕ್ಕೆ ಲೆಕ್ಕ ತೋರಿಸಿದ್ದಾರೆ. ಈ ಆರ್ಥಿಕ ವರ್ಷ ಕಳೆಯುವುದಕ್ಕೆ 15 ದಿವಸಗಳಿವೆ, ಏಜೆನ್ಸಿ ಫಿಕ್ಸ್ ಮಾಡುವುದಕ್ಕೆ ಇವರಿಗೆ ಒಂದು ವರ್ಷಬೇಕಾ? ಈ ವರ್ಗದವರ ಬಗ್ಗೆ ಎಷ್ಟು ನಿರ್ಲಕ್ಷ್ಯ, ಉದಾಸೀನ ತಾಳಿದೆ ಎಂದು ಮಾನ್ಯ ಮಂತ್ರಿಗಳೆ ಹೇಳುತ್ತೀರಾ? ಒಂದು ಏಜೆನ್ಸಿ ಫಿಕ್ಸ್ ಮಾಡುವುದಕ್ಕೆ ಒಂದು ವರ್ಷ ಬೇಕಾ? ಬೇರೆಯದಕ್ಕೆಲ್ಲಾ ನೀವು ಮಾಡುತ್ತೀರಿ, ಈ ಜನರಿಗೆ ನಾವೇನು ಉತ್ತರ ಹೇಳುವುದು?

ಶ್ರೀ ಡಿ. ಸುಧಾಕರ್ : ಮಾನ್ಯ ಸಭಾಧ್ಯಕ್ಷರೆ, ಕುಮಾರ ಸ್ವಾಮಿಯವರು ಹಿರಿಯ ಸದಸ್ಯರಾಗಿದ್ದಾರೆ, ಮಾಹಿತಿಯನ್ನು ತಿಳಿಸುವುದಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ ಸಾಮಾನ್ಯವಾಗಿ ನವೆಂಬರ್ ತಿಂಗಳಿಂದ ಗಂಗಾ ಕಲ್ಯಾಣ ಯೋಜನೆ ಆರಂಭವಾಗುತ್ತದೆ. ಈ ವರ್ಷ ವಿಳಂಬವಾಗುವುದಕ್ಕೆ ಕಾರಣ ತಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಕಾರಣ ಇಷ್ಟೆ ಏನು ವಿದ್ಯುತ್ ಆಗದಿರುವ ಪಂಪ್ ಮೋಟರ್‌ಗಳಿಗೆ ನಾವು ಪ್ರಾಯೋಗಿಕವಾಗಿ ಮೊನ್ನೆ

ಆರ್ಥಿಕ ವರ್ಷದಲ್ಲಿ ಟರ್ನ್ ಕೀ ಬೇಸಿಸ್‌ನಲ್ಲಿ ಜಾರಿಗೊಳಿಸಲು ಸುಮಾರು 5 ಬಾರಿ ಟೆಂಡರ್ ಕರೆದು ಬೋರ್‌ವೆಲ್ ಕೊರೆದು ಪಂಪ್ ಮೋಟಾರ್ ಹಾಕಿ electrification ಮಾಡತಕ್ಕಂಥ ಪೂರ್ಣಮಟ್ಟದಲ್ಲಿ ಅದನ್ನು ಪ್ರಯತ್ನ ಮಾಡಿದ್ದೇವೆ. ಆದರೆ ನಮಗೆ ಆದಷ್ಟು response ಬರದೆ ಇರುವುದರಿಂದ ಮತ್ತು ಆರ್ಥಿಕ ವರ್ಷ ಕೊನೆಗೊಳ್ಳುತ್ತದೆನ್ನುವ ದೃಷ್ಟಿಯಿಂದ ಈಗಾಗಲೇ ನಾವು ಕಾರ್ಯಾಚರಣೆಯಲ್ಲಿದ್ದೇವೆ. ಯಾವುದೇ ಕಾರಣಕ್ಕೂ ನಮ್ಮ ಆರ್ಥಿಕ ವರ್ಷದಲ್ಲಿ ಗುರಿಯನ್ನು ನಿಗದಿಪಡಿಸಲಾಗಿದೆ. ಅದು ಲ್ಯಾಪ್ಸ್ ಆಗುವುದಿಲ್ಲ. ಅದು ಯಾವಾಗಲೂ ಸಾಮಾನ್ಯವಾಗಿ ನವೆಂಬರ್-ಡಿಸೆಂಬರ್ ತಿಂಗಳಲ್ಲಿ ಚಾಲುವಾಗುತ್ತದೆ, 2 ತಿಂಗಳು ಲೇಟ್ ಆಗಿದೆ. ತಾವು ಹೇಳಿದಂತೆ ಅದನ್ನು 2008-09ರಲ್ಲಿ ಕೊರೆದದ್ದು ನಿಜ, ಪ್ರತಿ ಸಾರಿಯೂ ಕೂಡ ಕಳೆದ ಸಾರಿಯು ಆರ್ಥಿಕ ವರ್ಷದಲ್ಲೇನಾಗಿರುತ್ತದೆ, ಅದು ಮುಂದುವರೆಯುತ್ತಾ ಹೋಗುತ್ತದೆ, ಅದು ನಿರಂತರವಾಗಿರುವ ಪ್ರಕ್ರಿಯೆಯಾಗಿರುತ್ತದೆ, ಅದರಿಂದ ಯಾವುದೇ ಗುರಿಗೆ ತೊಂದರೆಯಾಗುವುದಿಲ್ಲ. ಜೊತೆಗೆ ಈ ಸಂದರ್ಭದಲ್ಲಿ ತಮಗೆ ಮಾಹಿತಿ ಕೊಡುತ್ತೇನೆ, ನಮ್ಮ ಸರ್ಕಾರ ಬಂದ ಮೇಲೆ ಸುಮಾರು 30,000 ವಿದ್ಯುತ್ ಸಂಪರ್ಕ ಕೊಡುವುದು ಬಾಕಿ ಇತ್ತು, ಆದರೆ ಅದನ್ನು 20,000 ಇಳಿಸಿದ್ದೇವೆ. ವಿಶೇಷವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ಎರಡು ವರ್ಷಗಳಿಂದ 30 ಕೋಟಿ ಹಣವನ್ನು ವಿದ್ಯೂದೀಕರಣಗೊಳಿಸುವುದಕ್ಕೆ ವಿಶೇಷವಾಗಿ ಕೊಡುತ್ತಿದ್ದಾರೆ. ಬರುವ ದಿವಸಗಳಲ್ಲಿ ಇವನ್ನು ಅದಷ್ಟು ಜಾಗ್ರತೆ ವಿದ್ಯುದೀಕರಣಗೊಳಿಸುವುದಕ್ಕೆ ಸರ್ಕಾರ ಕ್ರಮತೆಗೆದುಕೊಳ್ಳುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಟರ್ನ್ ಕೀ ಬೇಸಿಸ್ ಬಗ್ಗೆ ಕುಳಿತು ಚರ್ಚೆ ಮಾಡುವುದಕ್ಕೆ ಎಷ್ಟು ದಿವಸ ಬೇಕು? ಏಕೆ ಜಿಲ್ಲಾ ಮಟ್ಟಕ್ಕೆ ಕೊಡಿ, ರಾಜ್ಯಮಟ್ಟದಲ್ಲೇ ಈ ಒಪ್ಪಂದವನ್ನು ಕೊಡಬೇಕೆಂಬುದೇನಿದೆ? ಡಿ.ಸಿ. ಯವರಿಗೆ ಅಧಿಕಾರ ಕೊಡಿ.

ಶ್ರೀ ಡಿ. ಸುಧಾಕರ : ಇದನ್ನು ಜಿಲ್ಲಾ ಮಟ್ಟದಲ್ಲೆ ಟೆಂಡರ್ ಕರೆಯಲಾಗಿತ್ತು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : No water, no money scheme ಇಟ್ಟರೆ ಯಾರು ಬರುತ್ತಾರೆ ಹೇಳಿ? ಸರ್ಕಾರ ಇದನ್ನು ತುಂಬಾ ಸೀರಿಯಸ್ ಆಗಿ ತೆಗೆದುಕೊಂಡು ಆ ಜನರಿಗೆ ಕೆಲಸವಾಗಬೇಕು ಎನ್ನುವ ಮನಸ್ಸಿದ್ದರೆ

ಒಂದು ವಾರದಲ್ಲಿ ತೀರ್ಮಾನ ಮಾಡಬಹುದು, ನಿಮ್ಮ ಅಧಿಕಾರಿಗಳು ಪ್ರಯತ್ನ ಮಾಡುವುದಿಲ್ಲ, ನೀವು ಪ್ರಯತ್ನ ಮಾಡುವುದಿಲ್ಲ, ಹೇಗೆ ಈ ಕೆಲಸವಾಗುತ್ತದೆ? ಪ್ಯಾಕೇಜ್ ಸಿಸ್ಟಂ ಮಾಡಿ ಬೋರ್‌ವೆಲ್ ಕೊರೆಯುವು ದರಿಂದ ಹಿಡಿದು ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಟ್ಟು ಅವನಿಗೆ ಕೀ ಕೊಡುವ ವರೆಗೂ ಪ್ಯಾಕೇಜ್ ಸಿಸ್ಟಂ ಮಾಡಿ, ಬೇರೆ ಬೇರೆ ಯೋಜನೆಗಳಿಗೆ ಸರ್ಕಾರ ಮಾಡುತ್ತದೆ, ಈ ಯೋಜನೆಗೆ ಏತಕ್ಕೆ ಮಾಡಬಾರದು? ದಯಮಾಡಿ, ಅದನ್ನು ಮಾಡಿ. ಈ ವರ್ಷ ಒಂದೂ ಬೋರ್‌ವೆಲ್ ಕೊರೆದಿಲ್ಲ ದಯಮಾಡಿ, ಸರ್ಕಾರ ಸುಳ್ಳು ಹೇಳಬಾರದು. ಇಡೀ ರಾಜ್ಯದಲ್ಲಿ ಒಂದೇ ಒಂದು ಬೋರ್‌ವೆಲ್ ಕೊರೆದಿಲ್ಲ, ಕಳೆದ ವರ್ಷದ್ದು ಈ ವರ್ಷ ಕೊರೆದಿದ್ದಿರಿ ಅಷ್ಟೆ, ಈ ವರ್ಷದ ಗುರಿಯಲ್ಲಿ ಒಂದೇ ಒಂದು ಕೊರೆದಿಲ್ಲ.

ಶ್ರೀ ಸಿ.ಎಸ್. ಪುಟೇಗೌಡ : ಮಾನ್ಯ ಅಧ್ಯಕ್ಷರೆ, ಈ no water no money scheme ಎಂದೇನು ಮಾಡಲಾಗಿದೆ, ಬೇಸಿಗೆಯಲ್ಲಿ ಯಾವ ಕಂಟ್ರಾಕ್ಟರು ಕೊರೆಯುವುದಕ್ಕೆ ಬರುವುದಿಲ್ಲ, ಏಕೆಂದರೆ, ಅವರು ಮಳೆಗಾಲದಲ್ಲಿ ಕೆರೆಕಟ್ಟೆ ಎಲಾ ತುಂಬಿದಾಗ ಕೊರೆಯುತ್ತಾನೆ, ಅವನು ನಿಮ್ಮ ಹತ್ತಿರ ದುಡ್ಡು ತೆಗೆದುಕೊಳ್ಳುವುದಕ್ಕೆ ನೀರು ತೋರಿಸಬೇಕಲ್ಲ. ಆದುದರಿಂದ ಕಂಟ್ರಾಕ್ಟರ್ ಮಳೆಗಾಲದವರೆಗೆ ಕೊರೆಯುವುದೂ ಇಲ್ಲ, ಮಳೆಗಾಲಕ್ಕೆ ಕೊರೆದ ಬೋರ್‌ವೆಲ್‌ನಲ್ಲಿ ನೀರು ಬೇಸಿಗೆ ಕಾಲಕ್ಕೆ ಇರುವುದು ಇಲ್ಲ. ದಯಮಾಡಿ ಇದನ್ನು ಪುನರ್ ಪರಿಶೀನೆ ಮಾಡಿ, ಇನ್ನು 50 ಅಡಿ ಹೆಚ್ಚು ಕೊರೆಯು ವುದಕ್ಕೆ ಸರ್ಕಾರ ಅನುಮತಿ ಕೊಡುವುದಾಗಲಿ ಅಥವಾ ನೀರು ಬರುವವರೆಗೆ ಕೊರೆಯುವುದಕ್ಕೆ ಕುಮಾರ ಸ್ವಾಮಿಯವರೇನು ಹೇಳಿದರೆ ಆ ರೀತಿ ಮಾಡಿ. ಇದು ಮುಖ್ಯ ಕಾರಣ, ಬೇಸಿಗೆ ಕಾಲದಲ್ಲಿ ಕೊರೆಯುವುದಕ್ಕೆ ಬರುವುದಿಲ್ಲ, ಏಕೆಂದರೆ, ಕೊರೆದದ್ದಕ್ಕೆಲ್ಲಾ ದುಡ್ಡು ಬರದೆ ಇದ್ದರೆ ಅವನಿಗೆ ಲಾಸ್ ಆಗುತ್ತದೆ. ಅದಕ್ಕೆ ಅವನೇನು ಮಾಡುತ್ತಾನೆಂದರೆ, ಕೆರೆಕಟ್ಟೆ ತುಂಬುವುದನ್ನೆಲ್ಲಾ ನೋಡಿಕೊಂಡು ನೀರು ತೋರಿಸಿಬಿಟ್ಟು ದುಡ್ಡು ತೆಗೆದುಕೊಂಡು ಮನೆಗೆ ಹೋಗುತ್ತಾನೆ, ಆದುದರಿಂದ ಈ ಕಾರ್ಯಕ್ರಮ ಸರಿಯಾಗಿ ಯಶಸ್ವಿಯಾಗುತ್ತಿಲ್ಲ ಇದನ್ನು ಪುನರ್ ಪರಿಶೀಲನೆ ಮಾಡಿ, ಇದಕ್ಕೆ ಬೇರೆ ರೀತಿಯ ಕ್ರಮ ತೆಗೆದುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದೆಲ್ಲಾ ವಿಳಂಬವಾಗುವುದಕ್ಕೆ ಇದೇ ಕಾರಣ. ಕಳೆದ 5 ವರ್ಷದಿಂದ no water no

money ಇದರಿಂದ ಸರ್ಕಾರಕ್ಕೆ ಏನು ಹಣ ಉಳಿತಾಯವಾಗಿದೆ ನೋಡಿ, ಸರ್ಕಾರಕ್ಕೆ ಏನೂ ಲಾಭವಿಲ್ಲ. ಆಗ ಯಾವಾಗಲೊ ಒಂದು ಸಾರಿ ಹೇಳಿದ್ದಕ್ಕೆ ಇದು ನಡೆದುಕೊಂಡು ಬರುತ್ತಿದೆ, ಅದನ್ನು ದಯವಿಟ್ಟು ತೆಗೆದು ಹಾಕಿದರೆ ಇದರಲ್ಲಿ ನಿಮಗೆ 100% achievement ಬರುತ್ತದೆ. ಅದಕ್ಕೆ ನೀವು no water no money scheme ತೆಗೆದು, ಎಲ್ಲದಕ್ಕೂ ದುಡ್ಡು ಕೊಟ್ಟರೂ ಕೂಡ ಸರ್ಕಾರಕ್ಕೆ ಲಾಸ್ ಆಗುವುದಿಲ್ಲ, no water no money ನಿಂದ ಸರ್ಕಾರಕ್ಕೆ ಏನೂ ಸೇವಿಂಗ್ ಇಲ್ಲ, ದಯವಿಟ್ಟು ಇದನ್ನು ತೆಗೆಯಿರಿ, 100% implementation ಆಗುತ್ತದೆ.

ಶ್ರೀ ಡಿ. ಸುಧಾಕರ : ಸನ್ಮಾನ್ಯ ಸದಸ್ಯರುಗಳೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಚಿಕ್ಕನಗೌಡರು ಇಲ್ಲ. ಸಿ.ಟಿ. ರವಿಯವರು ತಮ್ಮ ಪ್ರಶ್ನೆ ಕೇಳುವುದು.

ಕ್ಯಾನ್ಸರ್, ಕಿಡ್ನಿ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಯ ಚಿಕಿತ್ಸೆ ಬಗ್ಗೆ

119 (826) ಶ್ರೀ ರವಿ ಸಿ.ಟಿ (ಚಿಕ್ಕಮಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಕಿಡ್ನಿ ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಿಗಳಿಗೆ ಬಡವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಚಿಕಿತ್ಸೆ ಲಭ್ಯವಿದೆಯೇ;

ಆ) ಲಭ್ಯವಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿವೆ; (ವಿವರ ನೀಡುವುದು);

ಇ) ಜಿಲಾ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಲು ಸರ್ಕಾರದ ಮುಂದಿರುವ ಯೋಜನೆಗಳೇನು;

ಈ) ಈ ಚಿಕಿತ್ಸೆಗಾಗಿ ಬಡವರಿಗೆ ಉಚಿತ ಚಿಕಿತ್ಸೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಲು ಉದ್ದೇಶಿಸಿದೆಯೇ;